ದೀಪ ಬಂತು' ಎಂದು ವಿವರಿಸಿತು.

ಪುಟ್ಟಿಗೆ ಅದು 'ಜನರೇಟರ್' ಎಂದು ಹೊಳೆಯಿತು. ತಕ್ಷಣ 'ಓ! ಅವರ ಕೆಲಸ ನಿಲ್ಲಿಸಲು ಒಂದು ಉಪಾಯ ಹೊಳೆಯಿತು' ಎಂದುಕೊಂಡಳು.

ಅನಂತರ ಕಾಡನ್ನು ಉಳಿಸುವ ಬಗ್ಗೆ ತಾತ ಹೇಳಿದ್ದ ವಿಚಾರಗಳನ್ನು ಒಂದೊಂದಾಗಿ ನೆನಪಿಸಿಕೊಂಡಳು. ಇದ್ದಕ್ಕಿದ್ದಂತೆ ಅವಳ ಮುಖ ಅರಳಿತು. 'ಬನ್ನಿ...' ಎಂದು ಬೆಟ್ಟದ ತಪ್ಪಲಿನಲ್ಲಿ ಬಿದ್ದಿದ್ದ ಕಲ್ಲು ಬಂಡೆಗಳ ಕಡೆಗೆ ಓಡಿದಳು. ಅಲ್ಲಿ ಒಂದು ಬಂಡೆಯನ್ನು ತೋರಿಸಿ 'ಅಂಬಾರಿ, ನಿನಗೆ ಇದನ್ನು ಸೊಂಡಿಲಿನಲ್ಲಿ ಎತ್ತಿಕೊಳ್ಳಲು ಆಗುತ್ತದೆಯೇ?' ಎಂದು ಕೇಳಿದಳು. ಅದು ಬಂಡೆಯನ್ನು ಸೊಂಡಿಲಲ್ಲಿ ಸ್ವಲ್ಪ ಮೇಲಕ್ಕೆ ಎತ್ತಿ ಅನಂತರ ಕೆಳಗೆ ಹಾಕಿಬಿಟ್ಟಿತು. 'ಅದಕ್ಕಿಂತ ಯಾವುದಾದರೂ ಸಣ್ಣ ಬಂಡೆಯನ್ನು ಎತ್ತು' ಎಂದಳು. ಅಂಬಾರಿ ಹಾಗೆ ಮಾಡಿತು.

'ಈಗ ಮೆಲ್ಲನೆ ಈ ಕಡೆ ಬಾ...' ಎಂದು ಮುಂದೆ ನಡೆದು ಒಂದು ಸಮತಟ್ಟಾದ ಜಾಗದಲ್ಲಿ ಆ ಬಂಡೆಯನ್ನು ಕೆಳಗೆ ಇಳಿಸುವಂತೆ ಹೇಳಿದಳು. ಅನಂತರ ಕಲಾಮೊಲ ಮತ್ತು ಹಸಿರುಪಕ್ಕೆ ಗಿಣಿ ಮರಿಗಳಿಗೆ 'ನೀವಿಬ್ಬರೂ ಇಷ್ಟೇ ಗಾತ್ರದ ಇನ್ನೂ ಐದಾರು ಚಿಕ್ಕ ಬಂಡೆಗಳನ್ನು ಹುಡುಕಿ' ಎಂದು ಪುಟ್ಟಿ ಹೇಳಿದಳು.

'ಅಂಬಾರೀ, ಅಂಗದ ಮತ್ತು ನಾನು ಮನೆಗೆ ಹೋಗಿ ಬರುತ್ತೇವೆ. ಅಷ್ಟರಲ್ಲಿ ಇದೇ ತರಹದ ಐದಾರು ಪುಟ್ಟ ಕಲ್ಲುಬಂಡೆಗಳನ್ನು ಇಲ್ಲಿಗೆ ತಂದಿಡು' ಎಂದು ಹೇಳಿ ತನ್ನ ಮನೆಯ ಕಡೆ ಓಡಿದಳು.

ಮನೆಯಲ್ಲಿ ಕೋತಿಮರಿಗೆ ಡೀಸೆಲ್ ಜನರೇಟರ್‌ಗೆ ಸೇರಿದಂತಿದ್ದ ಡೀಸೆಲ್ ತೊಟ್ಟಿಯ ಮುಚ್ಚಳವನ್ನು ತೋರಿಸಿದಳು. ಅದನ್ನು ತೆಗೆಯುವುದು ಮತ್ತು ಮುಚ್ಚುವುದನ್ನು ಅದಕ್ಕೆ ಚೆನ್ನಾಗಿ ಹೇಳಿಕೊಟ್ಟಳು. ಅದನ್ನು ತೆಗೆದಾಗ ಅಂಗದ 'ಅಕ್ಕಾ ಕೆಟ್ಟ ವಾಸನೆ...' ಎಂದು ಮೂಗು ಮುಚ್ಚಿಕೊಂಡಿತು.

ಪುಟ್ಟಿ ಮತ್ತು ಅಂಗದ ಹಿಂದಿರುಗುವಷ್ಟರಲ್ಲಿ ಗೆಳೆಯರು ಆರಿಸಿದ ಪುಟ್ಟ ಬಂಡೆಗಳನ್ನು ಅಂಬಾರಿ ಸೊಂಡಿಲಿನಿಂದ ಸುಲಭವಾಗಿ ಎತ್ತಿಕೊಂಡು ಒಂದರ ಪಕ್ಕದಲ್ಲಿ ಒಂದು ಜೋಡಿಸಿಬಿಟ್ಟಿತ್ತು. ಪುಟ್ಟಿ ಆ ಪುಟ್ಟ ಬಂಡೆಗಳ ಮೇಲೆ ತನ್ನ ಆಯಿಲ್ ಪೇಂಟ್‌ನಿಂದ ಚಿತ್ರವನ್ನು ಬಿಡಿಸಲು ಪ್ರಾರಂಭಿಸಿದಳು. ಕಾಡಿನ ಗೆಳೆಯರು ಬಂಡೆಯ ಮೇಲೆ ಮೂಡುತ್ತಿದ್ದ ಬಣ್ಣಗಳನ್ನು ನೋಡಿ ಆಶ್ಚರ್ಯಪಟ್ಟವು. ಆ ರೀತಿ ಬಣ್ಣದ ಚಿತ್ರವನ್ನು ಬರೆಯುವುದನ್ನು ಅವು ಎಂದೂ ನೋಡಿರಲಿಲ್ಲ. ಅದರ ಸಾಧ್ಯತೆಯೂ ಅವಕ್ಕೆ ಗೊತ್ತಿರಲಿಲ್ಲ. ಆ ಪುಟ್ಟ ಬಂಡೆಗಳ ಮೂಲ ಬಣ್ಣವೇ ಬದಲಾಗುತ್ತಿತ್ತು. ಕಾಡಿನ ಗೆಳೆಯರಿಗೆ ಅದನ್ನು ನಂಬಲೇ ಆಗಲಿಲ್ಲ.

'ಅಕ್ಕಾ... ಏನಕ್ಕಾ ಇದು?' ಎಂದು ಅವೆಲ್ಲಾ ಪುಟ್ಟಿಯನ್ನು ಕೇಳಿದವು. 'ಸ್ವಲ್ಪ ತಾಳಿ. ಹಚ್ಚಿರುವ ಬಣ್ಣ ಒಣಗಲಿ' ಎಂದಳು. ಕಲಾಮೊಲ ಮೆಲ್ಲಗೆ ಹೋಗಿ ಒಂದು ಬಂಡೆಯ ತುದಿಯನ್ನು ಕಾಲಿನಿಂದ ಸವರಿತು. ಕೆಂಪು ಬಣ್ಣ ಅದರ ಕಾಲಿಗೆ ಅಂಟಿಕೊಂಡಿತು. ಅದು 'ನನ್ನ ಕಾಲಿನಲ್ಲಿ ರಕ್ತ ಬರ್ತಾಇದೆ' ಎಂದು ಹೆದರಿ ಕೂಗಿತು.

ಪುಟ್ಟಿ 'ಛೀ ಕಳ್ಳಿ, ಹಸಿ ಕೆಂಪುಬಣ್ಣ ನಿನ್ನ ಕಾಲಿಗೆ ಅಂಟಿದೆ' ಎಂದಳು. ಅದರ ಕಾಲನ್ನು ಒರೆಸಿ, 'ಈಗಲೇ ಇದನ್ನು ಯಾರೂ ಮುಟ್ಟಬೇಡಿ ಒಣಗಲು ಬಿಡಿ' ಎಂದು ಹೇಳಿದಳು.

ಬಿಸಿಲಿಗೆ, ಬೀಸುತ್ತಿದ್ದ ಗಾಳಿಗೆ ಹಚ್ಚಿದ್ದ ಬಣ್ಣವು ಬೇಗ ಒಣಗಿತು. ಗೆಳೆಯರ ಸಹಾಯದಿಂದ ಆ ಪುಟ್ಟ ಬಂಡೆಗಳನ್ನು ಒಂದರ ಪಕ್ಕ ಇನ್ನೊಂದು, ಅವುಗಳ ಮೇಲೆ ಇನ್ನಷ್ಟು ಹೀಗೆ ಒಂದು ಕ್ರಮದಲ್ಲಿ ಜೋಡಿಸಿದಳು. ಅನಂತರ ಸ್ವಲ್ಪ ದೂರ ಹೋಗಿ ನಿಂತುಕೊಂಡಳು. 'ಎಲ್ಲಾ ಇಲ್ಲಿ ಬನ್ನಿ. ಇಲ್ಲಿಂದ ಅದನ್ನು ನೋಡಿ' ಎಂದು ಕರೆದಳು.

ಕಾಡಿನ ಗೆಳೆಯರೆಲ್ಲ ಅಲ್ಲಿಗೆ ಓಡಿದರು. ಜೋಡಿಸಿ ಇಟ್ಟಿದ್ದ ಆ ಬಂಡೆಗಳನ್ನು ನೋಡಿ 'ಓ...' ಎಂದು ಕಿರುಚಿದವು. 'ಅಕ್ಕಾ, ಇದು ಮನುಷ್ಯರ ಮುಖದ ಹಾಗೆ ಕಾಣುತ್ತೆ' ಎಂದು ಖುಷಿಯಿಂದ ನಲಿದಾಡಿದವು.

'ಈಗ ನಿಮಗೆ ತುಂಬಾ ಕೆಲಸ ಇದೆ. ಯಾರೋ ಬಂದು ಕಾಡಿನ ಮರಗಳನ್ನು ಕಡಿಯಲು ಬಿಡ ಬಾರದು. ಅದಕ್ಕೆ ನೀವು, ನಿಮ್ಮ ಬಂಧು, ಬಳಗ ಎಲ್ಲ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು'

